Form No.4 (Civil)
Deposition Sheets
(R.P.No.57)

# ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಯಾದಗಿರಿ

## ಎಸ್.ಸಿ. ಸಂಖ್ಯೆ: 96/2019

ಪ್ರಾ.ಸಾ. 1 ಚಾ.ಸಾ 3

| | | |
|---|---|---|
| ಹೆಸರು | : | ಅನೀಲಕುಮಾರ |
| ತಂದೆಯ ಹೆಸರು | : | ಹಣಮಂತ |
| ವಯಸ್ಸು | : | 44 ವರ್ಷ |
| ಉದ್ಯೋಗ | : | ಕೂಲಿ ಕೆಲಸ |
| ವಾಸ | : | ಯಾದಗಿರಿ |

ಪ್ರಮಾಣ ವಚನ ಭೋಧಿಸಿದ ದಿನಾಂಕ: 18-09-2025
ಮುಖ್ಯ ವಿಚಾರಣೆ ಸರಕಾರಿ ಅಭಿಯೋಜಕರಿಂದ

ನನಗೆ ಮೃತ ಅನಿತಾ ಹಾಗೂ ಚಾಸಾ-2 ಬಂಗಾರಮ್ಮ ರವರ ಪರಿಚಯ ಇರುತ್ತದೆ. ದಿಃ 17.07.2019 ರಂದು ಮಧ್ಯಾಹ್ನ 3.30 – 5.00 ಗಂಟೆಯವರೆಗೆ ನನ್ನನ್ನು ಹಾಗೂ ಚಾಸಾ-2 ಬಂಗಾರಮ್ಮ ಇವರನ್ನು ಜಿಲ್ಲಾ ಸರಕಾರಿ ಆಸ್ಪತ್ರೆ ಶವಗಾರ ಕೋಣೆಗೆ ಕರಿಸಿದ್ದರು. ನನ್ನ ಸಮಕ್ಷಮದಲ್ಲಿ ಶವಪಂಚನಾಮೆಯನ್ನು ಮಾಡಿದ್ದು ಇರುತ್ತದೆ. ಮೃತ ಅನಿತಾ ಉರಲು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಳು. ಆಕೆಯ ಕುತ್ತಿಗೆಯ ಮೇಲೆ ಕಂದು ಬಣ್ಣದ ಗಾಯವಾಗಿತ್ತು. ಬಲಗಾಲಿನ ಬೆರಳಿಗೆ ಪೆಟ್ಟಾಗಿತ್ತು. ಗಂಡನ ಕೊಡುಡತ್ತಿದ್ದ ಕಿರುಕುಳದಿಂದಾಗಿ ಆತ್ಮಹತ್ಯೆ ಮಾಡಿಕೊಂಡಿರುತ್ತಾಳೆ. ಸಾಕ್ಷಿದಾರರಿಗೆ ಪಂಚನಾಮೆಯನ್ನು ತೋರಿಸಿತ್ತಿತ್ತು ಅದನ್ನು **ನಿ.ಪಿ.1** ಮತ್ತು ಸಾಕ್ಷಿಯನ್ನು ಸಹಿಯನ್ನು **ನಿ.ಪಿ.1(ಎ)** ಎಂದು ಗುರುತಿಸಲಾಯಿತು ಮತ್ತು ಶವಪಂಚನಾಮೆ ಕಾಲಕ್ಕೆ ತೆಗೆದ ನಾಲ್ಕು ಭಾವಚಿತ್ರಗಳನ್ನು ಅನುಕ್ರಮವಾಗಿ **ನಿ.ಪಿ.2 ರಿಂದ 5** ಎಂದು ಗುರುತಿಸಲಾಯಿತು. ಭಾವಚಿತ್ರದಲ್ಲಿ ತಹಸೀಲ್ದಾರ ಸಹ ಇದ್ದಿತ್ತು ಇರುತ್ತದೆ. ನಿ.ಪಿ.1 ನ್ನು ಓದಿ ಹೇಳಿದ ಮೇರೆಗೆ ಸಹಿ ಮಾಡಿರುತ್ತೇನೆ.

ಪಾಟೀ ಸವಾಲು ಆರೋಪಿತರ ಪರವಾಗಿ ಶ್ರೀ. ಎಸ್.ಎ.ಕ್ಯೂ. ವಕೀಲರಿಂದ

1. ನಾನು ಯಾದಗಿರಿಯ ಅಂಬೇಡ್ಕರ ನಗರದಲ್ಲಿ ವಾಸವಾಗಿರುತ್ತೇನೆ. ಚಾಸಾ-1 ನನ್ನ ಅಕ್ಕನ ಮಗಳು ಆಗಿರುತ್ತಾಳೆ. ನಾನು ಪಿ.ಯು.ಸಿ ವರೆಗೆ ವಿಧ್ಯಾಭ್ಯಾಸ ಮಾಡಿರುತ್ತೇನೆ. ಶವದ ಪಂಚನಾಮೆಯನ್ನು ಮಾಡಲು ಪಿ.ಎಸ್.ಐ ನಾಗಮ್ಮ ಇವರು ಕರೆಯಿಸಿರುತ್ತಾರೆ. ಶವದ ಪಂಚನಾಮೆಯನ್ನು ಡಾಕ್ಟರ ಮಾಡಿರುತ್ತಾರೆ. ನಿಪಿ.1 ರಲ್ಲಿ ಏನೇನು ಬರೆದಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ನಾನು ಚಾಸಾ-1 ರವರ ಮನೆಗೆ ಹೋಗುವುದು ಬರುವುದು ಮಾಡುವುದಿಲ್ಲ. ದಿಃ 17.07.2019 ರಂದು ಮಧ್ಯಾಹ್ನ 3.30 ಕ್ಕೆ ನಾಗಮ್ಮ ಪಿ.ಎಸ್.ಐ ಅವರು ಆಸ್ಪತ್ರೆಗೆ ಕರೆದಿರುತ್ತಾರೆ. ಅವರು ಕರೆದಾಗ ನಾನು ಸದರಿ ಆಸ್ಪತ್ರೆಯಲ್ಲಿ ಇದ್ದೇನು. ಆಸ್ಪತ್ರೆಗೆ ನಾನು ಈ ಶವದಗೊಸ್ಕರ ನಾನು ಹೋಗಿದ್ದೆ. ಪ್ರಥಮವಾಗಿ ನಾನು ವರ್ಕನಳ್ಳಿ ಗ್ರಾಮಕ್ಕೆ ಹೋಗಿದ್ದೇನು. ಸದರಿ ಗ್ರಾಮಕ್ಕೆ ಹೋದಾಗ ಬೆಳಿಗ್ಗೆ 9.30 ಗಂಟೆ ಆಗಿತ್ತು. ಆಸ್ಪತ್ರೆಯಲ್ಲಿ ಒಟ್ಟು 50-60 ಜನ ಸೇರಿದ್ದರು. ಆ 50-60 ಜನರಲ್ಲಿ ವರ್ಕನಳ್ಳಿ ಗ್ರಾಮದವರು ಸಹ ಇದ್ದರು. ಚಾಸಾ-1 ನನ್ನ ಅಕ್ಕನ ಮಗಳಾಗಿದ್ದರಿಂದ ಅವರಿಗೆ ಸಹಾಯ ಮಾಡುವ ಉದ್ದೇಶದಿಂದ ನಿ.ಪಿ.1 ನ್ನು ಮಾಡುವ ಕಾಲಕ್ಕೆ ನಾನು ಸರಕಾರಿ ಆಸ್ಪತ್ರೆಯಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ಪೊಲೀಸ ಠಾಣೆಯಲ್ಲಿ ನಿ.ಪಿ.1 ಕ್ಕೆ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಮೃತಳಿಗೆ ಆರೋಪಿ ಕಿರುಕುಳ ಕೊಟ್ಟಿದ್ದರಿಂದ ಆತ್ಮಹತ್ಯೆ ಮಾಡಿಕೊಂಡಿರುತ್ತಾಳೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆಕೆಯ ಕುತ್ತಿಗೆ ಕಂದು ಬಣ್ಣದ ಗಾಯವಾಗಿತ್ತು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿ.ಪಿ.2 ರಲ್ಲಿ ನನ್ನ ಪೋಟೋ ಇರುತ್ತದೆ. ನಿ.ಪಿ.3 ರಿಂದ 5 ರಲ್ಲಿ ನನ್ನ ಭಾವಚಿತ್ರ ಇರುವುದಿಲ್ಲ ಎಂದರೆ ಸರಿ. ನಿ.ಪಿ.2 ಮನೆಯಲ್ಲಿ ತೆಗೆದಿದ್ದು ಇರುತ್ತದೆ ಎಂದರೆ ಸರಿಯಲ್ಲ. ಮನೆಯಲ್ಲಿ ಪೊಟೋ ತೆಗೆದಿರುತ್ತಾರೆ ಯಾವ ಮನೆಯಲ್ಲಿ ಪೊಟೋ ತೆಗೆದುಕೊಂಡಿರುತ್ತಾರೆ ಎಂದು ನಿಮಗೆ ಗೊತ್ತಿಲ್ಲ ಎನ್ನುವುದಕ್ಕೆ ಸಾಕ್ಷಿದಾರರು ನಿ.ಪಿ.2 ನ್ನು ಶವಗಾರದಲ್ಲಿ ತೆಗೆದಿರುತ್ತಾರೆ ಎಂದು ನುಡಿಯುತ್ತಾರೆ. ನನ್ನ ಸಮಕ್ಷಮ ನಿ.ಪಿ.1 ನ್ನು ಮಾಡಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ಯಾವುದೇ ಕಿರುಕುಳ ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ.

<u>ಮರುವಿಚಾರಣೆಃ-ಇಲ್ಲ</u>

(ನನ್ನ ಉಕ್ತ ಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓ.ಹೇ.ಕೆ.ಸ. ಇದೆ.

ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ಯಾದಗಿರಿ.

Form No.4 (Civil)
Deposition Sheets
(R.P.No.57)

# ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಯಾದಗಿರಿ

## ಎಸ್.ಸಿ. ಸಂಖ್ಯೆ: 96/2019

ಪ್ರಾ.ಸಾ. 2 ಚಾ.ಸಾ 1

| | | |
|---|---|---|
| ಹೆಸರು | : | ಮಂಜುಳಮ್ಮ |
| ಗಂಡನ ಹೆಸರು | : | ಸಿದ್ರಾಮಪ್ಪ |
| ವಯಸ್ಸು | : | 45 ವರ್ಷ |
| ಉದ್ಯೋಗ | : | ಅಂಗನವಾಡಿ ಸಹಾಯಕಿ |
| ವಾಸ | : | ವರ್ಕನಳ್ಳಿ |

ಪ್ರಮಾಣ ವಚನ ಭೋಧಿಸಿದ ದಿನಾಂಕ: 18-09-2025
ಮುಖ್ಯ ವಿಚಾರಣೆ ಸರಕಾರಿ ಅಭಿಯೋಜಕರಿಂದ

ಮೃತ ಅನಿತಾ ನನ್ನ ಮಗಳಾಗಿರುತ್ತಾಳೆ. ಆರೋಪಿಯ ಪರಿಚಯ ಇರುತ್ತದೆ ಆತ ನನ್ನ ಅಳಿಯ ಆಗಿರುತ್ತಾನೆ. ನನ್ನ ಮಗಳಾದ ಅನಿತಾಳಿಗೆ ಆರೋಪಿ ಲಕ್ಷ್ಮಯ್ಯನಿಗೆ ಕೊಟ್ಟು ಸುಮಾರು 6 ವರ್ಷಗಳ ಹಿಂದೆ ಮದುವೆ ಮಾಡಿರುತ್ತೇನೆ. ಮದುವೆಯಾದ 6 ತಿಂಗಳವರೆಗೆ ಅವರ ಸಂಸಾರ ಚೆನ್ನಾಗಿ ಇತ್ತು. ಅನಿತಾ ಮತ್ತು ಆರೋಪಿ ಡುಡಿದುಕೊಂಡು ತಿನ್ನಲು ಗುಜರಾತ ರಾಜ್ಯದ ಸುರತ್‌ಗೆ ಹೋಗಿದ್ದರು. ಆರೋಪಿ ತನ್ನ ಅಣ್ಣನಿಂದ ರೂ. 1,00,000/- ಸಾಲ ಮಾಡಿದ್ದನು. ಆರೋಪಿಯು ನನಗೆ ರೂ.1,00,000/- ಕೊಡುವಂತೆ ಆ ಸಾಲವನ್ನು ತಿರಿಸುತ್ತೇನೆ ಮತ್ತು ಬೆಂಗಳೂರಿಗೆ ಹೋಗಿ ದುಡಿದುಕೊಂಡು ವಾಸವಾಗಿರುತ್ತೇವೆ ಎಂದು ತಿಳಿಸಿರುತ್ತಾನೆ. ಬೇರೆಯವರಿಂದ ರೂ.50,000/- ಮತ್ತು ರೂ.50,000/- ಈಗೆ ಒಂದು ಲಕ್ಷ ರೂಪಾಯಿ ತೆಗೆದುಕೊಂಡು ಆರೋಪಿಯ ತಂದೆಯನ್ನು ಕರೆದುಕೊಂಡು ಸುರತಗೆ ಹೋಗಿರುತ್ತೇನೆ. ನಾನು ಹೋದ ಮೇಲೆ ನನ್ನ ಮಗಳು ಮತ್ತು ಆರೋಪಿ ಬಂದಿರುತ್ತಾನೆ. ನಾನು ಹಣ ಕೊಡಬೇಕು ಎನ್ನುವಷ್ಟರಲ್ಲಿ ಬಾತ್‌ರೂಮಿಗೆ ಹೋಗಿ ಮಾತ್ರೆ ಸೇವಿಸಿರುತ್ತಾಳೆ. ಅವರು ಏನು ಜಗಳ

ಆಡಿಕೊಂಡಿದ್ದರು ಎಂದು ನನಗೆ ಗೊತ್ತಿರುವುದಿಲ್ಲ. ಆಸ್ಪತ್ರೆಗೆ ಹೋಗಿ ನನ್ನ ಮಗಳು ಚಿಕಿತ್ಸೆ ಪಡೆದುಕೊಂಡು ಬಂದ ಮೇಲೆ ನನ್ನ ಮಗಳು ನಾನು ನನ್ನ ಮಗಳಿಗೆ ನಾನು ತಂದಂತಹ ರೂ.1,00,000/- ಕೊಡುವುದು ಬೇಡವೊ ಅಂತಾ ಕೇಳಿದಾಗ ನನ್ನ ಮಗಳು ಕೊಡು ನಾವು ಬೆಂಗಳೂರಿಗೆ ಹೋಗಿ ದುಡಿದು ವಾಪಸ್ಸು ಕೊಡುತ್ತೇವೆ ಎಂದು ಹೇಳಿರುತ್ತಾಳೆ. ರೂ.1,00,000/- ಹಣವನ್ನು ಆರೋಪಿಗೆ ಕೊಟ್ಟಿರುತ್ತೇನೆ. ಆರೋಪಿ ಮತ್ತು ನನ್ನ ಮಗಳನ್ನು ತೋರಣತಿಪ್ಪಕ್ಕೆ ಕರೆದುಕೊಂಡು ಬಂದಿರುತ್ತಾನೆ. ನನ್ನ ಮಗಳು ನಾನು ಕೊಟ್ಟಂತಹ ರೂ.1,00,000/- ಹಣವನ್ನು ಮರಳಿ ಕೊಡು ಅಂತಾ ಹೇಳಿದಾಗ ಆರೋಪಿ ಅನಿತಾಳಿಗೆ ಹೊಡೆಬಡಿ ಮಾಡಿರುತ್ತಾನೆ. ಆಗ ನಾನು ನನ್ನ ಮಗಳನ್ನು ವರ್ಕನಳ್ಳಿಗೆ ಕರೆದುಕೊಂಡು ಬಂದಿರುತ್ತೇನೆ. ಆರೋಪಿ ನನ್ನ ಮಗಳ ಶೀಲದ ಮೇಲೆ ಶಂಕೆ ವ್ಯಕ್ತಪಡಿಸಿ ಬೇರೆಯವರ ಜೊತೆ ನೀನು ಇದ್ದಿ, ಅವರಿಗೆ ಫೋನ ಮಾಡುತ್ತಿ ಇವರಿಗೆ ಫೋನ ಮಾಡುತ್ತಿ ಎಂದು ಆರೋಪಿ ಹೇಳುತ್ತಿದ್ದನು ಎಂದು ನನ್ನ ಮಗಳು ನನಗೆ ತಿಳಿಸಿರುತ್ತಾಳೆ. ಆರೋಪಿ ನನ್ನ ಮಗಳಿಗೆ ಟಾರ್ಚರ ಕೊಡುತ್ತಿದ್ದನು. ಹೀಗೆ 6 ವರ್ಷದ ಹಿಂದೆ ನಾನು ಬೆಂಗಳೂರಿಗೆ ಹೋಗಿದ್ದು ನನ್ನ ಮಗಳು ಮಧ್ಯಾಹ್ನ 3.00 ಗಂಟೆಯವರೆಗೆ ಕೆಲಸ ಮಾಡಿ ನನ್ನ ಮನೆಗೆ ನನ್ನ ಮಗಳು ಬಂದಿದ್ದು ಆಕೆಗೆ ಫೋನ ಮಾಡಿರುತ್ತೇನೆ. ನನ್ನ ಮಗಳು ಟಾರ್ಚರ ತಾಳಲಾರದೆ ವರ್ಕನಳ್ಳಿ ಗ್ರಾಮದ ನನ್ನ ಮನೆಯಲ್ಲಿ ಸೀರೆಯಿಂದ ನೇಣು ಹಾಕಿಕೊಂಡಿರುತ್ತಾಳೆ. ನನ್ನ ಮಗಳ ಸಾವಿಗೆ ಆರೋಪಿ ಕಾರಣವಾಗಿರುತ್ತಾನೆ. ಇದು ಆದ ಮೇಲೆ ನಾನು ದೂರನ್ನು ಕೊಟ್ಟಿರುತ್ತೇನೆ. ಸಾಕ್ಷಿಗೆ ದೂರನ್ನು ತೋರಿಸಲಾಗಿದ್ದು ಅದನ್ನು ಗುರುತಿಸಿರುತ್ತಾಳೆ ಅದನ್ನು **ನಿ.ಪಿ.6** ಅದಕ್ಕೆ ಇರುವ ಸಾಕ್ಷಿಯ ಸಹಿಯನ್ನು **ನಿ.ಪಿ.6(ಎ)** ಎಂದು ಗುರುತಿಸಲಾಯಿತು. ನನ್ನ ಮಗಳ ಮೃತ ದೇಹವನ್ನು ಸರಕಾರಿ ತೆಗೆದುಕೊಂಡು ಹೋಗಿದ್ದು, ಅಲ್ಲಿ ಫೋಟೊ ತೆಗೆದು ಕೊಂಡಿರುತ್ತಾರೆ. ವರ್ಕನಳ್ಳಿಗೆ ಎಸ್.ಐ ಮಂಜುಳಾ ರವರು ಬಂದಿದ್ದು ಆಜುಬಾಜುದವರನ್ನು ಕೇಳಿ ಬರೆದುಕೊಂಡಿರುತ್ತಾರೆ. ಭಾವಚಿತ್ರಗಳನ್ನು ನೋಡಿ

ಗುರುತಿಸಿರುತ್ತಾರೆ ಅವುಗಳನ್ನು ಈಗಾಗಲೇ ನಿ.ಪಿ.2 ರಿಂದ 5 ಎಂದು ಗುರುತಿಸಲಾಗಿದೆ.

**(ಈ ಸಂದರ್ಭದಲ್ಲಿ ಮಾನ್ಯ ಪಿಪಿರವರು ಈ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಬೇಕೆಂದು ಕೋರಿರುತ್ತಾರೆ, ಅನುಮತಿ ನೀಡಲಾಗಿದೆ.)**

**ಪಾಟೀ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕರವರಿಂದಃ**

1. ದಿಃ 18.07.2019 ರಂದು ಬೆಳಿಗ್ಗೆ 10.30 – 11.30 ಗಂಟೆಯವರೆಗೆ ಚಾಸಾ-4, 5 ರವರ ಸಮಕ್ಷಮ ವರ್ಕನಳ್ಳಿ ಗ್ರಾಮದಲ್ಲಿ ನನ್ನ ಮನೆಯಲ್ಲಿ ನಾನು ಜಾಗವನ್ನು ತೋರಿಸಿದ ಸ್ಥಳದಲ್ಲಿ ಗುನ್ನೆ ಸ್ಥಳವನ್ನು ಪಂಚನಾಮೆಯನ್ನು ಮಾಡಿರುತ್ತಾರೆ ಎಂದರೆ ಸರಿ. ಆ ಕಾಲಕ್ಕೆ ಗುನ್ನೆ ಸ್ಥಳದ ಭಾವಚಿತ್ರ ತೆಗೆದಿರುತ್ತಾರೆ ಎಂದರೆ ಸರಿ. ಆರೋಪಿ ನನ್ನ ಮಗಳಿಗೆ ನೀನು ಇಲ್ಲಿ ಇರಬೇಡ ಎಲ್ಲಿ ಆದರೂ ಹೋಗಿ ಸಾಯಿ ಅಂತಾ ಅಂದಿರುತ್ತಾನೆ ಎಂದರೆ ಸರಿ. ಆರೋಪಿತನ ಕೋಡುವ ಪ್ರಚೋದನೆಯಿಂದ ದಿಃ 16.07.2019 ರಂದು ಮಧ್ಯಾಹ್ನ 3.30 – 4.30 ರ ಅವಧಿಯಲ್ಲಿ ನನ್ನ ಮನೆಯಲ್ಲಿ ನನ್ನ ಮಗಳಾದ ಮೃತ ಅನಿತಾ ಇಕೆಯು ಕಬ್ಬಿಣದ ಪೈಪಿಗೆ ಸೀರಯಿಂದ ಉರಲು ಹಾಕಿಕೊಂಡು ಮೃತಪಟ್ಟಿರುತ್ತಾಳೆ ಎಂದರೆ ಸರಿ.

ಪಾಟೀ ಸವಾಲು ಆರೋಪಿತರ ಪರವಾಗಿ ಶ್ರೀ. ಎಸ್.ಎ.ಕ್ಯೂ. ವಕೀಲರಿಂದ

- ಈ ಹಂತದಲ್ಲಿ ಆರೋಪಿ ಪರ ವಕೀಲರು ಪಾಟಿ ಸವಾಲು ಕಾಲಾವಕಾಶ ಕೋರಿದ್ದು ರೂ.500/- ಭತ್ಯೆಯೊಂದಿಗೆ ಅನುಮತಿಸಲಾಯಿತು.

(ನನ್ನ ಉಕ್ತ ಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓ.ಹೇ.ಕೆ.ಸ. ಇದೆ.

ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ಯಾದಗಿರಿ.